ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ - ಶ್ರೀ. ಎಸ್.ಆರ್.ಟಿ. ವಕೀಲರಿಂದ ಆರೋಪಿಯ ಪರವಾಗಿ

12. ಆರೋಪಿಗೆ ನಾವು ಇದೂವರೆಗೆ ಎರಡು ಬಾರಿ ಸಾಲ ನೀಡಿರುತ್ತೇವೆ. ಮೊದಲ ಸಾಲದ ಮೊತ್ತ ನನಗೆ ನೆನಪಿಲ್ಲ. ಆದರೆ ಎರಡನೇ ಬಾರಿ ರೂ. 1,70,000/- ಹಣವನ್ನು ಆರೋಪಿಯು ಸಾಲವಾಗಿ ಪಡೆದಿರುತ್ತಾರೆ. ಮೊದಲನೇ ಸಾಲದ ಮೊತ್ತವನ್ನು ಸಂಪೂರ್ಣವಾಗಿ ಮರು ಪಾವತಿ ಮಾಡಿರುತ್ತಾರೆ.

13. ಜುಲೈ 2021 ರಲ್ಲಿ ಈ ಪ್ರಕರಣದಲ್ಲಿ ಹೇಳಿರುವ ಸಾಲವನ್ನು ಆರೋಪಿಯು ಕೇಳಿರುತ್ತಾರೆ. ಸದರಿ ಸಾಲವನ್ನು ಮಂಜೂರು ಮಾಡಲು ನಮ್ಮ ಆಡಳಿತ ಮಂಡಳಿಯಲ್ಲಿ ನಿರ್ಣಯ ಆಗಿದೆ. ಆರೋಪಿಯು ವೆಯಕ್ತಿಕ ಕಾರಣಗಳಿಗೆ ಸಾಲ ಕೇಳಿರುತ್ತಾರೆ. ಆಧಾರ ಪತ್ರದಲ್ಲಿ ಅದೇ ಕಾರಣವನ್ನು ಉಲ್ಲೇಖ ಮಾಡಲಾಗಿದೆ. ಈ ಸಾಲವನ್ನು ಆರೋಪಿಗೆ ಮಾತ್ರ ಮಂಜೂರು ಮಾಡಲಾಗಿದೆ. ಅದೇ ರೀತಿ ಅಧಾರ ಪತ್ರವನ್ನು ಸಹಃ ಆರೋಪಿಯಿಂದ ಪಡೆದುಕೊಳ್ಳಲಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಪ್ರನೋಟನ್ನು ಸಹಃ ಆರೋಪಿಯಿಂದ ಪಡೆದುಕೊಳ್ಳಲಾಗಿದೆ.

14. ಆರೋಪಿ ಪಡೆದುಕೊಂಡ ಸಾಲದ ಪೈಕಿ ಎಷ್ಟು ಮೊತ್ತವನ್ನು ಮರು ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಸ್ವಲ್ಪ ಮೊತ್ತವನ್ನು ಮರು ಪಾವತಿ ಮಾಡಿದ್ದಾರೆ. ಆದರೆ ನನಗೆ ನೆನಪಿಲ್ಲ, ಸ್ಟೇಟಮೆಂಟ್ ಅನ್ನು ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿಪಿ 12 ರ ಪ್ರಕಾರ ದಿನಾಂಕಃ 30.09.2024 ರಂದು ಆರೋಪಿಯು ರೂ. 60,000/- ನ್ನು ಕಟ್ಟಿರವ ಬಗ್ಗೆ ಕಂಡು ಬರುತ್ತದೆ ಎಂದರೆ ಸರಿ.

15. ದಿನಾಂಕಃ 25.03.2025 ರಂದು ಆರೋಪಿಯು ಚೆಕ್ಕು ನೀಡಿರುತ್ತಾರೆ. ಆ ಸಮಯಕ್ಕೆ ಅದರಲ್ಲಿ ಉಲ್ಲೇಖಿಸಿರುವ ಮೊತ್ತ ಆರೋಪಿಯಿಂದ ನಮಗೆ ಬರಲು ಬಾಕಿ ಇತ್ತು. ನಿಪಿ 1 ರಲ್ಲಿ ಆರೋಪಿಯು ಹಿಂದೆ ಪಾವತಿ ಮಾಡಿದ್ದ ಹಣವನ್ನು ಕಡಿತಗೊಳಿಸಿ ಬರೆಯಲಾಗಿದೆ. ನಮ್ಮ ಸಂಘದಿಂದ ಸರ್ಕಾರಿ ನೌಕರಿಯಲ್ಲಿ ಇಲ್ಲದೇ ಇರುವವರೆಗೆ ಸಾಲ ನೀಡಬೇಕಾದರೆ ಸರ್ಕಾರಿ ನೌಕರಿಯಲ್ಲಿ ಇರುವವರು ಜಾಮೀನುದಾರರು ಆಗಬೇಕು ಎಂಬ ನಿಯಮ ಇದೆ ಎಂದರೆ ಸರಿ. ಈ ಪ್ರಕರಣದಲ್ಲಿ ಹೇಳಿರುವ ಸಾಲಕ್ಕೆ ವೀರಪ್ಪ ಎಂಬ ಜಾಮೀನುದಾರರನ್ನು ಪಡೆದುಕೊಳ್ಳಲಾಗಿದೆ. ಆದರೆ ಅವರು ಸರ್ಕಾರಿ ನೌಕರರಲ್ಲ ಬದಲಾಗಿ ವ್ಯಾಪಾರಸ್ಥರು.

16. ನಿಪಿ 11 ರಲ್ಲಿ ಇರುವ ಮೊತ್ತವನ್ನು ದಿನಾಂಕಃ 08.04.2025 ರಂದು ಬರೆಯಲಾಗಿದೆ. ನಿಪಿ 11 ರಲ್ಲಿ ಆರೋಪಿಯು ಕಟ್ಟಿರುವ ಮೊತ್ತ ರೂ. 97,800/- ಎಂದು ಬರೆಯಲಾಗಿದೆ. ನಿಪಿ 11 ರಲ್ಲಿ ಉಲ್ಲೇಖಿಸಿರುವ ಲಿಗಲ್ ಚಾರ್ಜ್ಸ್ ಎಂದರೆ ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ವಕೀಲರ ಶುಲ್ಕ. ನಿಪಿ 11 ರಲ್ಲಿರುವ ಕೈಬರಹವನ್ನು ದಿನಾಂಕಃ 08.04.2025 ರಂದು ಬರೆಯಲಾಗಿದೆ. ಸದರಿ ದಿನಾಂಕದ ಮೊದಲೇ ಪ್ರಕರಣವನ್ನು ದಾಖಲು ಮಾಡಲಾಗಿತ್ತು ಎಂದರೆ ಸರಿ.

ಈ ಹಂತದಲ್ಲಿ ಮುಂದುವೆರದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ